ದಿನಾಂಕ: 11.09.2018 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿ ಪರವಾಗಿ,ಶ್ರೀ ಎನ್.ಎಂ. ವಕೀಲರಿಂದ,**

ದಿನಾಂಕ 18-01–2010 ರಂದು ನಾನು ಸದರಿ ದಾಖಲೆಯನ್ನು ಬರೆದುಕೊಟ್ಟು ಆ ಪ್ರಕಾರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಸದರಿ ದಿನಾಂಕದಿಂದಲೂ ನಮ್ಮನ್ನು ಸದರಿ ಜಮೀನು ಸರ್ವೆ ಮಾಡಿಸಿ ಹಾಗೂ ಸದರಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿಕೊಡುವಂತೆ ನಮ್ಮನ್ನು ಕೇಳುತ್ತಲೆ ಬಂದಿದ್ದಾರೆ ಎಂದರೆ ಸರಿಯಲ್ಲ.

ವಾದಿ ಕೇಳುತ್ತಲೆ ಬಂದಿದ್ದರು ನಾನು ಇವತ್ತು ನಾಳೆ ಮಾಡಿಸಿಕೊಡುತ್ತೇನೆ ಎಂಬುದಾಗಿ ವಾಯ್ದೆ ತೆಗೆದುಕೊಳ್ಳುತ್ತಲೆ ಬಂದಿದ್ದೇನೆ ಎಂದರೆ ಸಾಕ್ಷಿ ಸುಳ್ಳು ನಾನು ಆ ರೀತಿ ಹೇಳಿಲ್ಲ ಎಂದು ನುಡಿಯುತ್ತಾರೆ. ವಾದಿ ಆ ರೀತಿ ನನ್ನನ್ನು ಕೇಳಿದ್ದರೂ ಕೂಡ ನಾನು ಆ ರೀತಿ ವಾದಿ ಕೇಳಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಬೇರೆಯಾದ ಕಾರಣ ನನಗೆ ದಿನಾಂಕ 07-01-2012 ರಂದು ನನಗೆ ಲಿಖಿತವಾಗಿ ನೋಟಿಸ್ ಕೊಟ್ಟಿದ್ದು, ಬಂದು ಕ್ರಯ ಪತ್ರ ಬರೆದುಕೊಡುವಂತೆ ಹಾಗೂ ತಾನು ಉಳಿದ ಹಣ ಸಂದಾಯ ಮಾಡಲು ತಯಾರಾಗಿರುವುದಾಗಿ ಆ ನೊಟಿಸ್‌ನಲ್ಲಿ ತಿಳಿಸಿದ್ದರು ಎಂದರೆ ಸಾಕ್ಷಿ ನೋಟಿಸ್ ಕೊಟ್ಟಿದ್ದು ನಿಜ ಆದರೆ ನಾನು ಯಾವುದೇ ಅಗ್ರಿಮೆಂಟ್ ಬರೆದುಕೊಟ್ಟಿಲ್ಲ ಅವರೆ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಅಗ್ರಿಮೆಂಟ್‌ನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಬಾಧ್ಯತೆಯಿಂದ

ತಪ್ಪಿಸಿಕೊಳ್ಳಲು ವಾದಿ ನೋಟಿಸ್ ಕೊಟ್ಟ ನಂತರ ಅವರ ಮೇಲೆ ನಾನು ಸುಳ್ಳು ಸೃಷ್ಟಿ ಮಾಡಿ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನೋಟಿಸ್ ಕೊಟ್ಟ ನಂತರವೆ ನಾನು ಅಸಲು ದಾವಾ ಸಂಖ್ಯೆ 50/12 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

2010 ನೇ ಸಾಲಿನಲ್ಲಿ ಬಳ್ಳಾರಿಯಲ್ಲಿ ಸ್ಟ್ಯಾಂಪ್ ಪೇಪರ್ ಸಿಗತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ್ಟ್ಯಾಂಪ್ ಪೇಪರ್‌ನ್ನು ಎಲ್ಲಿಂದಲಾದರೂ ಅಂದರೆ ನಮ್ಮ ರಾಜ್ಯದಲ್ಲಿ ಎಲ್ಲಿಂದಲ್ಲಾದರೂ ತಂದು ಇಟ್ಟು ಕೊಂಡು ಬರೆಸಬಹುದು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2010ನೇ ಸಾಲಿನಲ್ಲಿ ಬಳ್ಳಾರಿಯಲ್ಲಿ ಸ್ಟ್ಯಾಂಪ್ ಪೇಪರ್ ಸಿಗುತಿರಲಿಲ್ಲ ಆ ಕಾರಣಕ್ಕೆ ವಾದಿ ಯಾವುದೇ ಕೆಲಸದ ನಿಮಿತ್ಯ ಬೆಂಗಳೂರಿಗೆ ಹೋದಾಗ ಅಲ್ಲಿಂದ ನಿಪಿ-1 ರ ಸ್ಟ್ಯಾಂಪ್ ಪೇಪರ್ ತಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2010ನೇ ಸಾಲಿನಲ್ಲಿ ಬಳ್ಳಾರಿಯಲ್ಲಿ ಸ್ಟ್ಯಾಂಪ್ ಪೇಪರ್ ಸಿಗುತ್ತಿರಲಿಲ್ಲ ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2010 ರಲ್ಲಿ ಸುಮಾರು 40 ದಿನಗಳ ಕಾಲ ಬಳ್ಳಾರಿಯಲ್ಲಿ ಸ್ಟ್ಯಾಂಪ್ ಪೇಪರಗೆ ಸಂಬಂಧಿಸಿದಂತೆ ಮುಷ್ಕರ ನಡೆಯುತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆ ಸಮಯದಲ್ಲಿ ಬಳ್ಳಾರಿಯಲ್ಲಿ ಸಂಘ-ಸಂಸ್ಥೆಗಳು ಮುಖ್ಯಸ್ಥರು ಪ್ರತಾಪ್ ರೆಡ್ಡಿ ಎಂಬುವರ ನಾಯಕತ್ವದಲ್ಲಿ ಮುಷ್ಕರ ನಡೆಯುತ್ತಿತ್ತು ಆ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ನಿಪಿ-1 ನ್ನು ವಾದಿ ಮತ್ತು ಇತರರು ಸೇರಿ ಸ್ಟ್ಯಾಂಪ್ ಪೇಪರನ್ನು ಸೃಷ್ಟಿ

ಮಾಡಿರುತ್ತಾರೆ ಎಂದು ನಾನು ಸುಳ್ಳು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಪತ್ರವನ್ನು ವಾದಿ ಸುಳ್ಳು ಸೃಷ್ಟಿ ಮಾಡಿ ಸರ್ಕಾರಕ್ಕೆ ಮತ್ತು ಜನರಿಗೆ ಮೋಸ ಮಾಡಿರುತ್ತಾರೆ ಎಂಬುದಾಗಿ ಹೇಳಿರುತ್ತೇನೆ ಎಂದರೆ ಸರಿ.

ವಾದಿ ಯಾರ್ಯಾರಿಗೆ ಸುಳ್ಳು ಪತ್ರ ಸೃಷ್ಟಿ ಮಾಡಿ ಮೊಸ ಮಾಡಿರುತ್ತಾರೆ ಎಂಬುದರ ಬಗ್ಗೆ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿದೆ ಆದರೆ ಅವರುಗಳ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವಾ ಜಮೀನಿನ ಬಗ್ಗೆ ಮತ್ತು ಯಾವ ಆಸ್ತಿಗಳ ಬಗ್ಗೆ ಎಂಬುದನ್ನು ನನಗೆ ಸ್ಪಷ್ಟವಾಗಿ ನನಗೆ ಹೇಳಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ವಾದಿ ಹಾಗೂ ಕೆರೆ ಕೊಡಪ್ಪ ಹಾಗೂ ಪತ್ರದಲ್ಲಿನ ಸಾಕ್ಷಿದಾರರು ಸ್ಟ್ಯಾಂಪ್ ಪೇಪರನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳಿದ್ದು ಈ ಸಂಬಂಧ ಅವರ ಮೇಲೆ ನೊಂದಣಾಧಿಕಾರಿಗಳ ಮುದ್ರಾಂಕ ಇಲಾಖೆ ಬೆಂಗಳೂರು ಇವರಿಗೆ ಕಂಪ್ಲೆಂಟ್ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ಬೆಂಗಳೂರಿನ ಶಿವಾಜಿ ನಗರದಲ್ಲಿ ಸ್ಟ್ಯಾಂಪ್ ಪೇಪರ್‌ನ್ನು ಖರೀದಿ ಮಾಡಿಕೊಂಡು ಬಂದಿದ್ದು, ಅವರನ್ನು ಭಯಭೀತರನ್ನಾಗಿ ಮಾಡಬೇಕೆಂಬ ದೃಷ್ಟಿಯಿಂದ ಈ ರೀತಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ವಾದಿಯ ಬಳಿ ನಾನು ಬಳ್ಳಾರಿಯಲ್ಲಿ ಸ್ಟ್ಯಾಂಪ್ ಪೇಪರ್ ಎಲ್ಲಿಯೂ ಸಿಗುತ್ತಿಲ್ಲ ನೀವು ಬೇರೆಯಲ್ಲಿಯಾದರು ಅದನ್ನು ತೆಗೆದುಕೊಂಡು ಬನ್ನಿ ಎಂಬುದಾಗಿ ಮಾತನಾಡಿದ್ದೆ ಎಂದರೆ ಸಾಕ್ಷಿ ನಾನು ಯಾರ ಬಳಿಯೂ ಹೋಗಿಲ್ಲ ಹಾಗೂ ಆ ರೀತಿ ಯಾರ ಬಳಿ ಮಾತನಾಡಿಲ್ಲ ಎಂದು ನುಡಿಯುತ್ತಾರೆ.

ನಾನು ಆ ರೀತಿ ವಾದಿ ಬಳಿ ಹೋಗಿ ಮಾತಾನಾಡಿದ್ದರು ಕೂಡ ಹೋಗಿಲ್ಲ ಹಾಗೂ ಮಾತನಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ, ಪಾಟೀ ಸವಾಲಿನಲ್ಲಿ ಬೆಂಗಳೂರಿನ ಶಿವಾಜಿ ನಗರದ ಉಪನೊಂದಣಾಧಿಕಾರಿಗಳ ಕಛೇರಿಯ ಬಳಿ ಬಾಂಡ್ ಪೇಪರ್‌ನ್ನು ಖರೀದಿಸಿದ್ದಾಗಿ ಹೇಳಿರುತ್ತಾರೆ ಎಂದರೆ ಸರಿ. ಬೆಂಗಳೂರಿನ ಶಿವಾಜಿ ನಗರದ ನೊಂದಣಿ ಕಛೇರಿಗೆ ನಾನು ಒಂದು ಅರ್ಜಿ ಕೊಟ್ಟಿದ್ದೆ ಎಂದರೆ ಸರಿ.

ಸದರಿ ಅರ್ಜಿಯಲ್ಲಿ (ನಿಡಿ-5) ದಿ. 8-1-2010 ರಂದು ವಾದಿ ಖರೀದಿಸಿರುವ ಬಾಂಡ್ ಪೇಪರ್ ಬಗ್ಗೆ ನಾನು ಹೇಳಿಲ್ಲ ಎಂದರೆ ಸಾಕ್ಷಿ ನಾನು ಅದರ ಬಗ್ಗೆಯೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಪತ್ರದಲ್ಲಿ 8-1-2010 ರಂದು ವಾದಿ ಖರೀದಿಸಿರುವ ಬಾಂಡ್ ಪತ್ರದ ಬಗ್ಗೆ ತಿಳಿಸಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಅರ್ಜಿಯಲ್ಲಿ ನಾನು ದಿನಾಂಕ 01–01–2010 ರಂದು ಅಥವಾ ದಿ. 18-1-2010 ರಂದು ಖರೀದಿಸಿರುವ ಸ್ಟ್ಯಾಂಪ್ ಪೇಪರನ ಬಗ್ಗೆ ಮಾತ್ರ ಕೇಳಿರುತ್ತೇನೆ ಎಂದರೆ ಸರಿ.

ನಾನು ಬಳ್ಳಾರಿಯ ನೊಂದಣಾಧಿಕಾರಿಗಳ ಕಛೇರಿಗೆ ನಿಡಿ-6 ರಂತೆ ಮತ್ತೊಂದು ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ. ನಿಡಿ-6 ರಲ್ಲಿ ದಿ. 11–01–2010, ದಿ.18-1-2010 ಮತ್ತು ದಿ.25–1-2010 ರಂದು ಕಛೇರಿಯಿಂದ ಮುದ್ರಾಂಕ ಕಾಗದಗಳನ್ನು ನೀಡಲಾಗಿದೆ ಎಂಬುದಾಗಿ ಹೇಳಿದ್ದು ಅದರಲ್ಲಿ ಎಷ್ಟು ಮೊತ್ತದ ಮುದ್ರಾಂಕ ಕಾಗದಗಳು ಎಂಬುದರ ಬಗ್ಗೆ ನಾನು ನಮೂದನೆ ಮಾಡಿಲ್ಲ ಎಂದರೆ ಸರಿ. ಸದರಿ ಸ್ಟ್ಯಾಂಪ್ ಪೇಪರ್‌ಗಳು ಸದರಿ ಕಛೇರಿಯಲ್ಲಿ ಸಿಗುತ್ತವೊ ಅಥವಾ ಇಲ್ಲವೊ ಎಂಬುದರ ಬಗ್ಗೆ ಯಾವುದೇ ಮಾಹಿತಿ ನಿಡಿ-6

ರಲ್ಲಿ ಇಲ್ಲ ಎಂದರೆ ನನ್ನ ಅರ್ಜಿಯ ಮುಖಾಂತರ ಕೇಳಿರುತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿ ಕಾಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಅರ್ಜಿ ಕಾಪಿಯನ್ನು ಸಲ್ಲಿಸದೆ ನಾನು ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ.18-01-2010 ರಂದು ನಾನು ವಾದಿಯಿಂದ ಮುಂಗಡ ಹಣ ತೆಗೆದುಕೊಂಡು ನಿಪಿ-1 ನ್ನು ಬರೆದುಕೊಟ್ಟಿದ್ದರು ಕೂಡ ಆ ಬಾದ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನಾರೀತಿಯಲ್ಲಿ ಸುಳ್ಳು ಕೇಸುಗಳನ್ನು ಹಾಗೂ ಸುಳ್ಳು ನೋಟಿಸ್‌ಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಊರಿನಲ್ಲಿ ಚಿಕನ್ ಕಟಿಂಗ್ ಮಿಷನ ಹಾಗೂ ಬಾಯಿಲ್ ಮಿಷನ್ ಇಟ್ಟಿದೆ ಎಂದರೆ ಸರಿಯಲ್ಲ. ಸದರಿ ಮಿಷನ್‌ಗೆ ವಿದ್ಯುತ್‌ಚ್ಛಕ್ತಿ ಸರಬರಾಜಿನ ಮೂಲಕ ಸದರಿ ಕೆಲಸ ಮಾಡುತ್ತಿದ್ದೆ ಎಂದರೆ ಸಾಕ್ಷಿ ನಾನು ವ್ಯವಸಾಯ ಮಾಡುತ್ತೇನೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ, ಕೆಎಬಿ ಅವರು ಕರೆಂಟ್ ಕಳ್ಳತನ ಮಾಡಿರುತೇನೆ ಎಂದು ನನ್ನ ಮೇಲೆ ಕೇಸು ಹಾಕಿದ್ದರು ಎಂದರೆ ಸರಿ. ಸದರಿ ಮಿಷನ್‌ಗೆ ಸಂಬಂಧಿಸಿದಂತೆ ನಾನು ಕರೆಂಟ್‌ನ್ನು ಅಕ್ರಮವಾಗಿ ಉಪಯೋಗಿಸಿರುತ್ತೇನೆ ಎಂಬುದಾಗಿ ಕಂಪ್ಲೆಂಟ್ ಮಾಡಿದ್ದರು ಎಂದರೆ ಸಾಕ್ಷಿ ಮಿಷನ್‌ಗೆ ಸಂಬಂಧಿಸಿದಂತೆ ಅಲ್ಲ ಕೇವಲ ಮೀಟರ್‌ಗೆ ಸಂಬಂಧಿಸಿದಂತೆ ಎಂದು ನುಡಿಯುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ 1ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಸ್ಪೆಷಲ್ ಕೇಸ್ ನಂ. 92/16 ಎಂಬುದಾಗಿ ನಡೆಯುತ್ತಿತ್ತು ಎಂದರೆ ಸಾಕ್ಷಿ ಸದರಿ ಕೇಸ್ ಈಗಾಗಲೇ ನನ್ನ ಪರವಾಗಿ ಆಗಿರಗಿತ್ತದೆ

ಎಂದು ಸಾಕ್ಷಿ ನುಡಿಯುತ್ತಾರೆ. ಇನ್ನು ಸದರಿ ಕೇಸು ನಡೆಯುತ್ತಿದೆ ಆದರೂ ಕೂಡ ನಾನು ಮುಕ್ತಾಯವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಂರಿಯಲ್ಲ. ಆ ಕೇಸ್‌ನಲ್ಲಿ ನಾನು ಜಾಮೀನು ಪಡೆದಿರುತ್ತೇನೆ ಎಂದರೆ ಸರಿ.

ಸಾಕ್ಷಿದಾರರಿಗೆ ಅವರು ಸಲ್ಲಿಸಿರುವ ವಕಾಲತ್ ನಾಮದ ದೃಢೀಕೃತ ನಕಲು ಹಾಗೂ ಬೇಲ್ ಬಾಂಡ್‌ನ ದೃಢಿಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಲಾಯಿತು.

ನನ್ನ ಹೆಂಡತಿಯ ಹೆಸರು ಅರುಣಾ ಎಂದರೆ ಸರಿ. 2012 ಸಾಲಿನಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಅಂತ್ಯೋದಯ ಅನ್ನ ಯೋಜನೆಯ ಅಡಿಯಲ್ಲಿ ಕಾರ್ಡ್ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಯೋಜನೆ ಬಡತನ ಮಟ್ಟಕ್ಕಿಂತ ಕೆಳಗಿರುವವರಿಗೆ ಮಾತ್ರ ಅನ್ವಯವಾಗುತ್ತದೆ ಎಂದರೆ ಸಾಕ್ಷಿ ನಾನು ತೆಗೆದುಕೊಂಡಿಲ್ಲ ನನ್ನ ಹೆಂಡತಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ಕಾರಕ್ಕೆ ನನ್ನ ಹೆಂಡತಿ ಕಡೆಯಿಂದ ಸುಳ್ಳು ಮಾಹಿತಿ ಕೊಟ್ಟು ನಾನೇ ಆ ಕಾರ್ಡ್‌ನ್ನು ತೆಗೆಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-9 ಮತ್ತು 10 ರಲ್ಲಿರುವ ಸಹಿ ಹಾಗೂ ನಿಪಿ-1 ರಲ್ಲಿರುವ ಸಹಿ ಎಲ್ಲವೂ ನನ್ನದೆ ಆಗಿರುತ್ತದೆ ಎಂದರೆ ಸಾಕ್ಷಿ ನಿಪಿ-9 ಮತ್ತು ನಿಪಿ-10 ರಲ್ಲಿರುವ ಸಹಿ ನನ್ನದಾಗಿದ್ದು ನಿಪಿ-1 ರಲ್ಲಿರುವ ಸಹಿ ನನ್ನದಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-1 ರ ದಾಖಲೆಯನ್ನು ನಾನು ಬರೆದುಕೊಟ್ಟಿದ್ದರು ಕೂಡ ಆ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕೆ

ವಾದಿಯರು ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಹಾಗೂ ನನಗೆ ಮೋಸ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ

2ನೇ ಹೆ ಹಿ ಸಿವಿಲ್ ಜಡ್ಜ್ ,ಬಳ್ಳಾರಿ